ಸಮಯದಲ್ಲಿ ತೋರಿದ ಸಹನೆ ಮತ್ತು ಆ ಸಂದರ್ಭಗಳನ್ನು ನನಗೆ ಅರ್ಥ ಮಾಡಿಸಿದ ರೀತಿಯಿಂದಲೇ ಇವತ್ತು ನಾನು ಈ ನಾನಾಗಲು ಸಾಧ್ಯವಾಗಿರುವುದು.

◆ **ದಲಿತ ಸಮುದಾಯ ಕಾಲಾಂತರದಿಂದ ಎದುರಿಸುತ್ತಿರುವ ಬಹು ದೊಡ್ಡ ಸಾಮಾಜಿಕ ಅನಿಷ್ಟ ಅಸ್ಪೃಶ್ಯತೆ. ಅಂತಹ ಅವಮಾನ ಎದುರಿಸಿಯೇ ಹೊರ ಹೊಮ್ಮಿ ಅಜರಾಮರರಾಗಿರುವ ಅನನ್ಯ ದಲಿತ ಸಾಧಕರೂ ಇದ್ದಾರೆ. ನಿಮ್ಮ ಸಂವೇದನೆಯನ್ನು ರೂಪಿಸಿದ ಸಂಗತಿ ಬಗ್ಗೆ ಹೇಳಲು ಸಾಧ್ಯವೇ?**

ನನ್ನ ಸಂಪೂರ್ಣ ಬದಲಾಯಿಸಿ, ಬೇರೆ ವ್ಯಕ್ತಿತ್ವವನ್ನ ನೀಡಿದ್ದು ನಾನು ಏಳನೇ ತರಗತಿಯಲ್ಲಿ ಇದ್ದಾಗ ನಡೆದ ಈ ಘಟನೆ. ನಾನಾಗ ತುಂಬಾ ಪೆದ್ದುಪೆದ್ದಾಗಿ ಮೊದ್ದುಮೊದ್ದಾಗಿ, ಯಾರೇನೇಳಿದ್ರೂ ಹೂಂಗುಟ್ಕಂಡು, ಹೇಳಿದ್ದನ್ನೆಲ್ಲಾ ಕೇಳ್ಕಂಡು, ಏನಂದ್ರು ಅನಸ್ಕಂಡು ಇದ್ದವಳು. ನಮ್ಮ ಕ್ಲಾಸ್ ಲೀಡರ್ ತುಂಬಾ ಸುಂದರಿ. ಅಷ್ಟೇ ಮಾಡ್ ಮತ್ತು ಸ್ಟೈಲಿಶ್. ಬೆಳಕು ಅನ್ನುವಷ್ಟು ಬೆಳ್ಳಗೆ. ಅರಳು ಹುರಿದಂಗೆ ಇಂಗ್ಲಿಷ್ ಪಟಪಟ ಬಾಯೊಳ್ಗೆ. ದೊಡ್ಡ ಗುಂಪು ಇರ್ತಿತ್ತು ಯಾವಾಗಲು ಹಿಂದೆ. ಅವಳ ಸ್ನೇಹಕ್ಕೆ ಹಾತೊರೆಯುತ್ತಾ ನಾನು ಸದಾ ಅವಳ ಹಿಂದಿಂದೆ ಸುತ್ತುತ್ತಿದ್ದೆ. ಅವಳು ಹೇಳಿದ ಹಾಗೆ ಕೇಳ್ತಿದ್ದೆ. ಹೇಳಿದ್ದನ್ನೆಲ್ಲಾ ಮಾಡ್ತಿದ್ದೆ. ಎಷ್ಟು ಇಷ್ಟಪಡ್ತಿದ್ದೆ, ಅವಳ್ನ ಹಂಬಲಿಸುತ್ತಿದ್ದೆ ಅಂದರೆ ಅವಳ ಒಂದು ನೋಟಕ್ಕೆ, ನಗುವಿಗೆ, ಮಾತಿಗೆ ಅವಳು ಕಾಲಲ್ಲಿ ತೋರಿಸಿದ್ದನ್ನು ತಲೆ ಮೇಲೆ ಹೊತ್ತು ಮಾಡ್ತಿದ್ದೆ ಅಷ್ಟು. ಅವಳು ನನ್ನ ಹಂಗೇ ನಡೆಸಿಕೊಳ್ಳುತ್ತಿದ್ಲು. ತುಂಬಾ ಸ್ಮಾರ್ಟ್. ಅವಳ ಟ್ರಂಕು, ಲಂಚ್ ಬಾಕ್ಸು ಹಿಡ್ಕಂಡು ನಾನು ಅವಳ ಹಿಂದಿಂದೆ ಹೋಗ್ತಿದ್ದೆ. ಮನಸಲ್ಲಿ ಅವ್ಳು ನನ್ನ ಬೆಸ್ಟ್ ಫ್ರೆಂಡ್ ಅಂತ ನಾನೇ ಅಂದ್ಕಂಡ್ಬಿಟ್ಟಿದ್ದೆ. ಅವ್ಳು ನನ್ನ ಏನಂದ್ಕಂಡಿದ್ಲು ಆ ಯೋಚ್ನೇನೆ ಇರ್ಲಿಲ್ಲ. ನನಗವ್ಳು ಇಷ್ಟ ಅಷ್ಟೇ ನಂದು. ಅವತ್ತೊಂದು ದಿನ ಯಾವತ್ತಿನ ಹಂಗೆ ಮಧ್ಯಾಹ್ನ ಊಟಕ್ಕೆ ಕುಂತ್ವಿ ಶಾಲೇಲಿ. ಬಹಳ ಇಷ್ಟವಾದ ಬಸ್ಸಾರು, ಮುದ್ದೆ, ಸೊಪ್ಪು ಅನ್ನ ಅವತ್ತು ನನ್ನ ಊಟ. ನಮ್ಮ ಲೀಡರ್‌ದು ಆಲೂಗಡ್ಡೆ ಈರುಳ್ಳಿ ಹುಳಿ, ಅನ್ನ, ಮಜ್ಜಿಗೆ. ಅವರಮ್ಮ ತುಂಬಾ ಶಿಸ್ತು. ಊಟ ಬಿಡುವಂತಿಲ್ಲ. ಅವತ್ತು ಆಕೆಗೆ ಚೂರು ಸೇರ್ತಿಲ್ಲ. ನಂಗೆ ತಿನ್ನಕೆ ಹೇಳಿದ್ಲು. ಒಂದು ತುತ್ತು ತಿನ್ನಕೂ ನನ್ನ ಹೊಟ್ಟೇಲಿ ಜಾಗ ಇರ್ಲಿಲ್ಲ. ಒಲ್ಲೆ ಅಂದೆ ಸಾರಿ ಹೇಳ್ತನೇ. ಮೊದ್ಲ ಸರ್ತಿ ನಾನವ್ಳ ಮಾತಿಗೆ ಇಲ್ಲ ಅಂದಿದ್ದೆ. ಆಗ ಆಕೆ ಏನೂ ಅನ್ಲಿಲ್ಲ. ಅವತ್ತು ಕೊನೆ ಪಿರಿಯಡ್ಡು ಗೇಮ್ಸ್. ಬೆಲ್ಲಾಯ್ತು. ಲೈನ್ ಮಾಡ್ಲಿಕೆ ಹೊರಟ್ವಿ ಎಲ್ಲ ಎದ್ದು. ಆಗ ಆ ನನ್ನ ಸ್ನೇಹಿತೆ ಮುಂದೆ ಬಂದವಳೆ ‘ಎಲ್ರು ನಿಮ್‌ನಿಮ್ಮ ಪ್ಲೇಸ್ನಲ್ಲಿ ಕುತ್ಕೊಳಿ ಒಂದ್ನಮಿಷ’ ಅಂದು ಬ್ಲಾಕ್ ಬೋರ್ಡ್ ಕಡೆ ತಿರುಗಿ ಸೀಮೆಸುಣ್ಣದಲ್ಲಿ ಬರೆಯೋಕೆ ಶುರು ಮಾಡಿದ್ಲು. ‘ಜಾಹ್ನವಿ ಮೀನು, ಮಾಂಸ, ಹಂದಿ ತಿನ್ನುತ್ತಾಳೆ. ಅವಳು ಕೀಳು ಜಾತಿಯವಳು. ಅವಳನ್ನು ಯಾರೂ ಮುಟ್ಟಿಸಿಕೊಳ್ಳಬೇಡಿ...’ ಅಂತ ದೊಡ್ಡದಾಗಿ ಬರ್ದುಬಿಟ್ಟಿದ್ಲು. ಸರಕ್ಕನೆ ನನ್ನ ಅಕ್ಕಪಕ್ಕದವರೆಲ್ಲ ನನ್ನಿಂದ ದೂರ ಸರಿದುಕೊಂಡ್ರು. ನಂಗೆ ತಾಗಿಸಿಕೊಳ್ಳದಂಗೆ ಸ್ಕರ್ಟ್‌ಗಳ್ನ ಮುದುರಿ ಹಿಡಿದು ದೂರ ಸರಿದು ಹೊರ್ಟುಹೋದ್ರು. ನಾನು ಬೋರ್ಡನ್ನೇ ನೋಡ್ತಾ ಸುಮ್ಮನೆ ನಿಂತು ಬಿಟ್ಟೆ. ಇಡೀ ಕ್ಲಾಸಲ್ಲಿ ಒಬ್ಳೆ. ಅಳಬೇಕೆನಿಸಿದ್ರೂ ಅಳು ಬರ್ತಿಲ್ಲ. ನಂಗೆ ತಾಗದಂಗೆ ಎಲ್ಲರು ಹೋದ ರೀತಿ, ಬೆಸ್ಟ್ ಫ್ರೆಂಡು ಅಂತ ಅಂದ್ಕಂಡವ್ಳಿಂದ ಈ ವರ್ತನೆ! ಆಘಾತ ನಂಗೆ. ಹೆಂಗೆ ಮನೆ ತಲುಪಿದ್ನೋ ಗೊತ್ತಿಲ್ಲ. ಅಪ್ಪಾಜಿ ಊರಲ್ಲಿ ಇರ್ಲಿಲ್ಲ. ಯಾರ್ಜತೆಗೂ ಮಾತಾಡ್ಲಿಲ್ಲ. ಏನೂ ಬೇಡನಿಸ್ತಿತ್ತು. ಆದ್ರೆ ಶಾಲೆ ತಪ್ಪಿಸುವಂತೇ ಇರ್ಲಿಲ್ಲ. ಮಾರನೆ ದಿನ ಸಿದ್ಧಳಾಗಿ ಮನೆಯಿಂತು ಬಿಟ್ಟೆ. ಶಾಲೆ ಕಡೆ ಮಾತ್ರ ತಲೆ ಹಾಕ್ಲಿಲ್ಲ.

ಒಂದು ವಾರ ಹಿಂಗೆ ಶಾಲೆ ತಪ್ಪಿಸಿ ಎಲ್ಲೆಲ್ಲೊ ಅಲ್ದು ಸಿಕ್ಕಿಬಿದ್ದೆ. ಸುದ್ದಿ ಅಪ್ಪಾಜಿತನಕ ಹೋದ್ರೆ ಮತ್ತೆ ಶಾಲೆಗೆ ಕಳುಸ್ತಾರೆ ಅಂತ ಅಮ್ಮನ ದುಡ್ಡಿನ ಡಬ್ಬಿಯಿಂದ ಒಂದು ರೂಪಾಯಿ ತಗಂಡು ಮನೆ ಬಿಟ್ಟೆ.